# ವಿಶ್ವನಾಥ ಉಪಾಧ್ಯಾಯ

❑ ಸ್ವರ್ಣಗೌರಿ

ಶ್ರೀರಾಮಕೃಷ್ಣರ ಪ್ರಭಾವವಲಯಕ್ಕೆ ಬಂದು ತಮ್ಮ ಬದುಕನ್ನು ಪರಿವರ್ತಿಸಿಕೊಂಡ ಅಸಂಖ್ಯಾತ ಮಂದಿಯಲ್ಲಿ ಅವರ ಸಮಕಾಲೀನರಾದ ವಿಶ್ವನಾಥ ಉಪಾಧ್ಯಾಯರ ಒಂದು ಕಿರುಚಿತ್ರಣವನ್ನು ನೀಡಿರುವ ಕುಮಾರಿ ಸ್ವರ್ಣಗೌರಿ ಅವರು ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಭಕ್ತರು.

**ಒಂದು** ದಿನ ವಿಶ್ವನಾಥ ಉಪಾಧ್ಯಾಯನು ಬೆಳಕಿನಿಂದ ಕೂಡಿದ ಮಹಾಪುರುಷನೋರ್ವನು ದಿವ್ಯಜ್ಞಾನವನ್ನು ಕೊಡಲು ಕೈಬೀಸಿ ಕರೆಯುತ್ತಿರುವಂತೆ ಕನಸು ಕಂಡನು. ಅದಾದನಂತರ ವಿಶ್ವನಾಥನು ಮನಶ್ಶಾಂತಿಯನ್ನೇ ಕಳೆದುಕೊಂಡನು. ಕೆಲವೊಮ್ಮೆ ತನ್ನ ಕನಸು ನನಸಾಗಲೆಂದು ಪ್ರಾರ್ಥನೆ ಮಾಡುತ್ತಾ, ಆ ಮಹಾಪುರುಷನ ಪ್ರತ್ಯಕ್ಷ ದರ್ಶನಕ್ಕಾಗಿ ಕಾತರಿಸತೊಡಗಿದನು. ಮತ್ತೊಮ್ಮೆ ಆ ರೀತಿಯ ಕನಸಾದರೂ ಆಗಲೆಂದು ಚಡಪಡಿಸತೊಡಗಿದನು.

ವಿಶ್ವನಾಥ ಉಪಾಧ್ಯಾಯನು ನೇಪಾಳ ಸರ್ಕಾರದ ಒಂದು ಬೃಹತ್ ಮರದ ಕಾರ್ಖಾನೆಯ ಮೇಲಧಿಕಾರಿಯಾಗಿದ್ದನು. ಒಳ್ಳೆಯ ಬ್ರಾಹ್ಮಣ ಮನೆತನದಲ್ಲಿ ಜನ್ಮ ತಾಳಿದವ. ಆತನ ತಂದೆ ಶಿವಶಂಕರ ಉಪಾಧ್ಯಾಯನು ನೇಪಾಳ ಸರ್ಕಾರದ ಪ್ರತಿನಿಧಿಯಾಗಿ ಕಲ್ಕತ್ತಾದಲ್ಲಿ ಕೆಲಸ ಮಾಡುತ್ತಿದ್ದನು. ಸದಾ ಶಿವನ ನಾಮಸ್ಮರಣೆ ಮಾಡುತ್ತಿದ್ದ ಶಿವಭಕ್ತನಾದ ಕಾರಣ ಮಗನಿಗೆ "ವಿಶ್ವನಾಥ" ಎಂದು ಹೆಸರಿಟ್ಟಿದ್ದನು. ಸೈನ್ಯದಲ್ಲಿ ಇರುವಾಗ ಒಂದು ಕೈಯಲ್ಲಿ ಕೋವಿ ಹಿಡಿದು ಇನ್ನೊಂದು ಕೈಯಲ್ಲಿ ಪೂಜೆ ಮಾಡುತ್ತಿದ್ದನಂತೆ! ಶಿವನ ಪೂಜೆಯಾಗದ ಹೊರತು ಒಂದು ಹನಿ ನೀರನ್ನೂ ಕುಡಿಯುತ್ತಿರಲಿಲ್ಲ. ಭಕ್ತರ ವಂಶದಲ್ಲಿ ಹುಟ್ಟಿದ ವಿಶ್ವನಾಥನು ಎಷ್ಟೋ ಒಳ್ಳೆಯ ಗುಣಗಳನ್ನು ಮೈಗೂಡಿಸಿಕೊಂಡಿದ್ದನು. ಪೂಜೆಯ ವೇಳೆಯಲ್ಲಿ ಭಕ್ತಿ, ಭಾವಗಳಿಂದ ಆತನ ಕಣ್ಣುಗಳು ಕೆಂಪಾಗಿಬಿಡುತ್ತಿದ್ದವು. ಆಧ್ಯಾತ್ಮಿಕ ಭಾವದಲ್ಲಿ ಮನಸ್ಸು ತನ್ಮಯವಾಗಿ ಬಿಡುತ್ತಿತ್ತು. ಸಂಪ್ರದಾಯಸ್ಥ ಬ್ರಾಹ್ಮಣನಾದ್ದರಿಂದ ಪೂಜೆ, ಜಪ, ಆರತಿ, ಶಾಸ್ತ್ರಪಠನ ಎಲ್ಲವನ್ನೂ ಚಾಚೂತಪ್ಪದೆ ಮಾಡುತ್ತಿದ್ದನು.

ದಕ್ಷಿಣೇಶ್ವರದಲ್ಲಿ ಒಬ್ಬ ಸಂತನು ಸದಾ ಭಗವದ್ಭಾವದಲ್ಲಿ ಮಗ್ನನಾಗಿ ಆಳವಾದ ಆಧ್ಯಾತ್ಮಿಕ ಸತ್ಯಗಳನ್ನು ಮನೋರಂಜಕವಾಗಿ ಹೇಳುತ್ತಾನೆಂಬ ಸುದ್ದಿಯು ಕಿವಿಗೆ ಮುಟ್ಟಿತು. ಸುದ್ದಿ ತಿಳಿದ ತಕ್ಷಣವೇ ಆತುರ, ಕಾತರ, ಉದ್ವೇಗಗಳಿಂದ ಆ ಸಂತನ ದರ್ಶನಕ್ಕಾಗಿ ಹೋದನು. ಆದರೆ ಅಲ್ಲಿ ನೋಡಿದ್ದೇನು? ಮಾತೇ ಹೊರಡದೆ ಮೂಕನಾಗಿ ನಿಂತುಬಿಟ್ಟನು. ತನ್ನ ಮುಂದೆ ಕುಳಿತಿರುವ ಸಂತನು ಮತ್ತಾರೂ ಅಲ್ಲ, ಕನಸಿನಲ್ಲಿ ಕಂಡ ಅದೇ ಮಹಾಪುರುಷ! ಆನಂದೋದ್ವೇಗಗಳಿಂದ ಕಣ್ಣಿನಲ್ಲಿ ನೀರು ಸುರಿಯತೊಡಗಿತು. ಮತ್ತೆ ಮತ್ತೆ ಪ್ರಣಾಮ ಮಾಡತೊಡಗಿದನು. ಆನಂದದಲ್ಲಿ ಮೈಮರೆತುಬಿಟ್ಟನು.

ಶ್ರೀರಾಮಕೃಷ್ಣರು ಮೊದಲ ಭೇಟಿಯಲ್ಲೇ ಆತನ ಹೃದಯವನ್ನು ಗೆದ್ದು ಎಷ್ಟೋ ವರ್ಷಗಳ ಆತ್ಮೀಯನೋ ಎಂಬಂತೆ ಅಕ್ಕರೆಯಿಂದ ಮಾತನಾಡಿಸಿದರು. ಮೊದಲ ದರ್ಶನವೇ ಎಷ್ಟು ಪರಿಣಾಮ ಬೀರಿತೆಂದರೆ ಆ ರಾತ್ರಿಯನ್ನು ದಕ್ಷಿಣೇಶ್ವರದಲ್ಲಿಯೇ ಕಳೆದ. ಮೊದಲ ನೋಟದಲ್ಲೇ ಅವರೊಬ್ಬ ಸಿದ್ಧಪುರುಷರು ಎಂಬುದನ್ನು ಮನಗಂಡ. ತಾನೇ ಪಂಡಿತನಾಗಿದ್ದರೂ ರಾಮಕೃಷ್ಣರ ಆಕರ್ಷಣೆಗೆ ಒಳಗಾಗಿ ಪ್ರತಿ ವಾರ ಬರಲುಪಕ್ರಮಿಸಿದ. ರಾಮಕೃಷ್ಣರೂ ತಿಂಗಳಿಗೊಮ್ಮೆ ಆತನ ಮನೆಗೆ ಹೋಗುತ್ತಿದ್ದರು. ವಿಶ್ವನಾಥನ ಪತ್ನಿಯು ಶ್ರೀಕೃಷ್ಣನ ಭಕ್ತೆ. ವಿವಿಧ ಭಕ್ಷ್ಯಭೋಜನಗಳನ್ನು ತಯಾರಿಸಿ ಶ್ರದ್ಧೆ, ಭಕ್ತಿ, ಪ್ರೀತಿಯಿಂದ ಶ್ರೀರಾಮಕೃಷ್ಣರ ಸೇವೆ ಮಾಡುತ್ತಿದ್ದಳು. ಸೇವಾಪಚಾರವಾಗದಂತೆ ನಿಷ್ಠೆಯಿಂದ ಎಲ್ಲವನ್ನೂ ಅಣಿ ಮಾಡುತ್ತಿದ್ದಳು. ವಿಶ್ವನಾಥನು ಬಹಳ ಬೇಗನೇ ರಾಮಕೃಷ್ಣರು ಅವತಾರ ಪುರುಷರು ಎಂಬುದನ್ನು ಅರಿತುಕೊಂಡುಬಿಟ್ಟನು.

ರಾಮಕೃಷ್ಣರ ಮೋಹಕವಾದ ವ್ಯಕ್ತಿತ್ವ, ಮಾತುಕತೆ ಎಲ್ಲವೂ ವಿಶ್ವನಾಥನ ಮನಸ್ಸನ್ನು ಸೆಳೆದಿದ್ದರೂ ಆತನಿನ್ನೂ ಪೂರ್ಣ ಮನಸ್ಸನ್ನು ಅರ್ಪಿಸಿರಲಿಲ್ಲ. ಒಮ್ಮೆ ಒಂದು ಸಂಕಷ್ಟದಲ್ಲಿ ಸಿಲುಕಿದ. ಗಂಗೆಯ ದಡದಲ್ಲಿ ಇದ್ದ ಬಹಳ ಬೆಲೆಬಾಳುವ ಮರದ ತುಂಡುಗಳನ್ನು ಉಬ್ಬರವು ಬಂದು ಕೊಚ್ಚಿಕೊಂಡು ಹೋಯಿತು. ಒಂದೆರಡು ಬಾರಿಯಲ್ಲ. ಅನೇಕ ಬಾರಿ ಈ ರೀತಿ ಆಗಿ ತುಂಬಾ ನಷ್ಟವನ್ನು ಅನುಭವಿಸಿದ. ರಾಜನಿಗೆ ಲೆಕ್ಕವನ್ನು ಒಪ್ಪಿಸಲು ಭಯ. ತಿಂಗಳ ವರಮಾನವು ದೈನಂದಿನ ಜೀವನಕ್ಕೆ ಸಾಕಾಗುತ್ತಿರಲಿಲ್ಲ. ವಿಶ್ವನಾಥನು ಗುಪ್ತವಾಗಿ ಮರಗಳ ಸಾಗಾಣಿಕೆ ಮಾಡುತ್ತಿದ್ದಾನೆಂಬ ಸುಳ್ಳುವದಂತಿಯನ್ನು ಯಾರೋ ರಾಜನ ಕಿವಿಗೆ ಹಾಕಿದರು. ಕೋಪಗೊಂಡ ರಾಜನು ಲೆಕ್ಕವನ್ನು ತಂದೊಪ್ಪಿಸಬೇಕೆಂದು ಆಗ್ರಹಪಡಿಸಿದನು. ನೇಪಾಳದಲ್ಲಿ ರಾಜನ ಮಾತೇ ವೇದವಾಕ್ಯ. ಹೆದರಿದ ಉಪಾಧ್ಯಾಯನು ರಾಮಕೃಷ್ಣರ ಬಳಿ ಓಡಿಹೋಗಿ ಎಲ್ಲವನ್ನೂ ಅರುಹಿದನು. ಠಾಕೂರರು ಆತನಿಗೆ ಅಭಯದಾನವಿತ್ತರು. ಇದರಿಂದ ಮಾನಸಿಕ ಶಕ್ತಿಯನ್ನು ಪಡೆದ ವಿಶ್ವನಾಥನು ರಾಜನ ಬಳಿ ಹೋಗಿ ಪರಿಸ್ಥಿತಿಯನ್ನು ನಡೆದಂತೆ ವಿವರಿಸಿ ಹೇಳಿದನು. ನಡೆದ ವೃತ್ತಾಂತವನ್ನೆಲ್ಲಾ ಕೇಳಿದ ರಾಜನು ಆತನ ಸತ್ಯಕ್ಕೆ ಮೆಚ್ಚಿದನು. ಕೂಡಲೇ ಅಧಿಕಾರದಲ್ಲಿ ಕ್ಯಾಪ್ಟನ್ ಹುದ್ದೆಗೆ ಬಡ್ತಿಯನ್ನು ನೀಡಿ ಅವನ ಸಂಬಳವನ್ನು ನಾಲ್ಕರಷ್ಟು ಹೆಚ್ಚಿಸಿದನು. ಭಕ್ತವೃಂದದಲ್ಲಿ "ಕ್ಯಾಪ್ಟನ್" ಎಂದೇ ವಿಶ್ವನಾಥನು ಮುಂದೆ ಹೆಸರಾದನು.

ಕಲ್ಕತ್ತೆಗೆ ಹಿಂದಿರುಗಿದ ಕೂಡಲೇ ವಿಶ್ವನಾಥನು ಮಾಡಿದ ಮೊದಲ ಕೆಲಸವೆಂದರೆ ರಾಮಕೃಷ್ಣರ ಬಳಿ ಹೋಗಿ ತನ್ನ ಕೃತಜ್ಞತೆಯನ್ನು ಅರ್ಪಿಸಿದ್ದು. ಕೊರಳನ್ನು ಬಿಗಿಯುವ ಹಗ್ಗವು ಹೂವಿನ ಮಾಲೆಯಾಗಿ ಪರಿಣಮಿಸಿತ್ತು! ಯಾವ ಘಟನೆಯಿಂದ ಆತನ ಕೆಲಸಕ್ಕೇ ಸಂಚಕಾರವಾಗಬೇಕಿತ್ತೋ ಆ ಘಟನೆಯು ಬಡ್ತಿಯನ್ನು ದೊರಕಿಸಿಕೊಟ್ಟಿತು. ಕ್ಯಾಪ್ಟನ್‌ನ ಆನಂದಕ್ಕೆ ಪಾರವೇ ಇಲ್ಲದಂತಾಯಿತು. ರಾಮಕೃಷ್ಣರ ಪಾದಪದ್ಮಗಳಲ್ಲಿ ಸುರಿಸಿದ ಕೇವಲ ಒಂದು ಹನಿ ಕಣ್ಣೀರು ಎಂತಹ ಚಮತ್ಕಾರವನ್ನು ಮಾಡಿತು! ಅಂದಿನಿಂದ ಆತನು ತನ್ನ ಸಂಪೂರ್ಣ ತನು, ಮನ, ಧನವನ್ನು ಅವರ ಪಾದಪದ್ಮಗಳಿಗೆ ಅರ್ಪಿಸಿ ಕೃತಕೃತ್ಯನಾದನು.

ಆಚಾರವಂತ ಹಾಗೂ ನಿಷ್ಠಾವಂತ ಬ್ರಾಹ್ಮಣನಾದ್ದರಿಂದ ರಾಮಕೃಷ್ಣರು ಕೇಶವಸೇನನ ಮನೆಗೆ ಹೋಗುವುದನ್ನು ಕಂಡು ದಿಗ್ಭ್ರಮೆಗೊಂಡಿದ್ದನು. ಕಾರಣ ಕೇಶವಚಂದ್ರಸೇನನು ಆಂಗ್ಲೇಯರೊಡನೆ ಬೆರೆಯುವುದು, ತನ್ನ ಮಗಳನ್ನು ಅನ್ಯಜಾತಿಯ ಹುಡುಗನಿಗೆ ಕೊಟ್ಟಿರುವುದು ಇವೆಲ್ಲವೂ ವಿಶ್ವನಾಥನಿಗೆ ಸಹ್ಯವಾಗುತ್ತಿರಲಿಲ್ಲ. ರಾಮಕೃಷ್ಣರು ಒಂದೆರಡು ಆಂಗ್ಲೇಯ ಪದಗಳನ್ನು ಪ್ರಯೋಗಿಸುವುದು ಕೇಳಿ ಚಕಿತಗೊಂಡಿದ್ದನು. ಆದರೆ ರಾಮಕೃಷ್ಣರು ನಿಧಾನವಾಗಿ ವಿಶ್ವನಾಥನ ಈ ಸಂಕುಚಿತ ಭಾವನೆಗಳನ್ನು ಸಹನೆಯಿಂದ ಬದಲಾಯಿಸಿದರು.

ರಾಮಕೃಷ್ಣರ ಸಂಗಸುಖದ ಲಾಭವನ್ನು ಅನೇಕ ವರ್ಷಗಳ ಕಾಲ ನೇರವಾಗಿ ಅನುಭವಿಸಿದ ಕೆಲವೇ ಭಕ್ತರಲ್ಲಿ ಈತನು ಒಬ್ಬನಾದನು. ಆಗಸ್ಟ್ ೧೬, ೧೮೮೬ರಲ್ಲಿ ರಾಮಕೃಷ್ಣರ ಮಹಾಸಮಾಧಿಯ ಬಳಿಕವೂ ಅವರ ಸೇವೆಯ ಸೌಭಾಗ್ಯ ದೊರೆತ ಭಾಗ್ಯಶಾಲಿ. ಸಮಾಚಾರ ತಿಳಿದ ವಿಶ್ವನಾಥನು ಬೆಳಗ್ಗೆ ಎಂಟು ಘಂಟೆಯ ವೇಳೆ ಅಂದರೆ ಮಹಾಸಮಾಧಿಯ ಏಳು ಗಂಟೆಗಳ ತರುವಾಯ ಬಂದನು. ಸಮಾಧಿಯ ಲಕ್ಷಣಗಳನ್ನು ಚೆನ್ನಾಗಿ ಬಲ್ಲವನಾಗಿದ್ದ. ಗೋವಿನ ತುಪ್ಪದಿಂದ ಬೆನ್ನಿನ ನರಗಳನ್ನು ಉಜ್ಜತೊಡಗಿದ. ಸಮಾಧಿಯ ಸ್ಥಿತಿಯಲ್ಲಿ ಇದ್ದ ರಾಮಕೃಷ್ಣರ ಪ್ರಾಣಪಕ್ಷಿಯು ಇನ್ನೂ ಹೋಗಿಲ್ಲವೆಂದು ಅರಿತನು. ಅಂತಹ ದೇಹವನ್ನು ದಹನ ಮಾಡಿದರೆ ಬ್ರಹ್ಮಹತ್ಯೆಯ ದೋಷವು ಬರುವುದು ಎಂದು ಹೇಳಿ, ವಿಯೋಗವನ್ನು ತಡೆಯಲಾರದೆ ಬಿಕ್ಕಳಿಸಿದನು. ಒಂದು ಘಂಟೆಯ ಹೊತ್ತಿಗೆ ವೈದ್ಯ ಮಹೇಂದ್ರನಾಥ ಸರ್ಕಾರ್ ಬಂದು ದೇಹವನ್ನು ಪರೀಕ್ಷಿಸಿ ಅರ್ಧ ಗಂಟೆಯ ಹಿಂದೆ ಅವರು ದೇಹವನ್ನು ತ್ಯಜಿಸಿರುವುದಾಗಿ ತಿಳಿಸಿದನು.

ರಾಮಕೃಷ್ಣರ ದೀರ್ಘ ಸಂಗದಿಂದ ಬಾಹ್ಯಜೀವನಕ್ಕೆ ಕುಂದಾಗದಂತೆ ಆತನ ಆಂತರಿಕ ಜೀವನವೇ ಬದಲಾಗಿಹೋಯಿತು! ಅವರ ಸಂಗ ಆತನ ಜೀವನಕ್ಕೆ ಹೆಚ್ಚಿನ ಮೌಲ್ಯವನ್ನು ತುಂಬಿತು ಮತ್ತು ಸಾರ್ಥಕ್ಯ ಭಾವವನ್ನು ತಂದಿತು. ಆತನ ಆಧ್ಯಾತ್ಮಿಕ ಪ್ರಗತಿಯನ್ನು ಕಂಡ ರಾಮಕೃಷ್ಣರು, "ಕ್ಯಾಪ್ಟನ್ ಎಂತಹ ಒಳ್ಳೆಯ ಸ್ಥಿತಿಯನ್ನು ತಲುಪಿರುವನು! ಪೂಜಾಸನದಲ್ಲಿ ಕುಳಿತಿರುವಾಗ ಓರ್ವ ಋಷಿಯಂತೆ ಕಂಡುಬರುವನು. ಪೂಜಾವಿಧಿಗಳನ್ನೆಲ್ಲಾ ಮುಗಿಸಿ ಎದ್ದಾಗ ಆತನ ಕಣ್ಣುಗಳು ಭಾವದಿಂದ ಇರುವೆ ಕಚ್ಚಿದಂತೆ ಊದಿಬಿಡುತ್ತವೆ. ಸದಾ ಗೀತೆ, ಭಾಗವತ ಮುಂತಾದ ಗ್ರಂಥಗಳ ಅಧ್ಯಯನದಲ್ಲೇ ತೊಡಗಿರುತ್ತಾನೆ" ಎಂದು ಪ್ರಶಂಸಿಸುತ್ತಿದ್ದರು. ಆದರೆ ಅವನ ಪಾಂಡಿತ್ಯವನ್ನು ಎಷ್ಟೇ ಮೆಚ್ಚಿಕೊಂಡರೂ ಶಾಸ್ತ್ರಾರ್ಥವನ್ನು ಸರಿಯಾಗಿ ಗ್ರಹಿಸಲಾಗದ ಅವನ ಸ್ಥಿತಿಯನ್ನು ಗಮನಿಸಿ, "ಅತಿಯಾಗಿ ಓದಿ ಹಾಳಾಗಿ ಹೋಗಿದ್ದೀಯೆ. ತುಂಬಾ ಓದಬೇಡ" ಎನ್ನುತ್ತಿದ್ದರು.

ಹೆಚ್ಚು ಹೆಚ್ಚು ಆಧ್ಯಾತ್ಮಿಕ ಪ್ರಗತಿಯನ್ನು ಸಾಧಿಸಿದಂತೆ ರಾಮಕೃಷ್ಣರ ಮಹಿಮೆಯನ್ನು ಎಲ್ಲರಿಗೂ ಸಾರತೊಡಗಿದನು. ಒಮ್ಮೆ ರಾಮಚಂದ್ರದತ್ತನು, "ರಾಮಕೃಷ್ಣರ ಬಗ್ಗೆ ನಿನ್ನ ಅಭಿಪ್ರಾಯವೇನು?" ಎಂದು ಕೇಳಿದಾಗ ವಿಶ್ವನಾಥನು, "ನಾನು ವೇದ, ವೇದಾಂತಗಳನ್ನು ಸಾಕಷ್ಟು ಓದಿರುವೆ. ಅನೇಕ ಮಂದಿ ಸಾಧುಸಂತರನ್ನು ಭೇಟಿಯಾಗಿರುವೆ. ಆದರೆ ಇವರ ಬಳಿ ಬಂದನಂತರವೇ ನನ್ನ ಆಧ್ಯಾತ್ಮಿಕ ತೃಷೆಯು ಇಂಗಿತು. ಮತ್ತೇನು ಹೇಳಲಿ? ವೇದೋಪನಿಷತ್ತುಗಳಲ್ಲಿ ದೊರೆಯದಿರುವುದು 'ಇಲ್ಲಿ' ದೊರಕುವುದು. ಶ್ರುತಿಗಳಲ್ಲಿ ಹೇಳಿರುವ ಸತ್ಯವೇ ಮೈವೆತ್ತು ಬಂದಂತಿದೆ. ಶಾಸ್ತ್ರಗಳ ಸಜೀವ ಪ್ರಮಾಣ" ಎಂದು ಗದ್ಗದ ಕಂಠದಿಂದ ಭಾವಪೂರ್ಣವಾಗಿ ಹೇಳಿದನು.

ಶ್ರೀರಾಮಕೃಷ್ಣರ ಸಂಗಕ್ಕೆ ಬಂದ ವಿಶ್ವನಾಥ ಉಪಾಧ್ಯಾಯನ ಜೀವನವು ಸಾರ್ಥಕವಾಯಿತು. ಭಕ್ತಿಯೇ ಸಾರವಸ್ತು. ಮನುಷ್ಯ ಜೀವನದ ಉದ್ದೇಶವೇ ಶುದ್ಧಭಕ್ತಿಯ ಪ್ರಾಪ್ತಿ. ಅಹೇತುಕ ಕೃಪಾಸಿಂಧುವಿನ ಕೃಪೆಯು ಯಾರ ಮೇಲೆ ಹೇಗೆ ಬೀಳುವುದೋ ಬಲ್ಲವರಾರು? ◆

## ಜ್ಞಾನವಾಹಿನಿ ಕಾರ್ಯಕ್ರಮಗಳು
## ಫೆಬ್ರವರಿ 2004

**2003, ಡಿಸೆಂಬರ್ 5 ರಿಂದ 20ರವರೆಗೆ ದಾವಣಗೆರೆ ಜಿಲ್ಲೆಯಲ್ಲಿ ಜ್ಞಾನವಾಹಿನಿ ಕಾರ್ಯಕ್ರಮಗಳು ಅತ್ಯಂತ ಯಶಸ್ವಿಯಾಗಿ ನಡೆದವು. ಈ ಸಂದರ್ಭದಲ್ಲಿ 28 ಶಾಲಾ ಕಾಲೇಜುಗಳಲ್ಲಿ 65 ವ್ಯಕ್ತಿತ್ವ ವಿಕಸನ ಚಲನಚಿತ್ರ ಪ್ರದರ್ಶನಗಳು ನಡೆದು ಅದರ ಪ್ರಯೋಜನವನ್ನು 10,500ಕ್ಕೂ ಹೆಚ್ಚಿನ ವಿದ್ಯಾರ್ಥಿ ವಿದ್ಯಾರ್ಥಿನಿಯರು ಪಡೆದುಕೊಂಡಿದ್ದಾರೆ. ಅದಲ್ಲದೆ ಬೆಳಗ್ಗೆ ನಡೆದ ಮೆರವಣಿಗೆ ಮತ್ತು ಸಂಜೆ ನಡೆದ ಸತ್ಸಂಗಗಳಲ್ಲಿ 3000 ವಿದ್ಯಾರ್ಥಿಗಳು ಮತ್ತು 9,500 ವಯಸ್ಕರು ಪಾಲ್ಗೊಂಡಿದ್ದರು.**

**ಜ್ಞಾನವಾಹಿನಿ ಕಾರ್ಯಕ್ರಮಗಳು ಫೆಬ್ರವರಿ 11ರಿಂದ ಬಳ್ಳಾರಿ ಜಿಲ್ಲೆಯಲ್ಲಿ ಪ್ರಾರಂಭವಾಗುತ್ತವೆ. ಕಾರ್ಯಕ್ರಮಗಳ ವಿವರಗಳನ್ನು ಬಳ್ಳಾರಿ ಜಿಲ್ಲೆ ಕುಡತಿನಿಯ ಶ್ರೀಯುತ ಪಂಪಾಪತೆಪ್ಪ, ರಾಮಗಿರಿ ಆಶ್ರಮ, ಕುಡತಿನಿ 583 112, ಫೋನ್.ನಂ.08392-48256 ಇವರಿಂದ ಪಡೆಯಬಹುದು. 'ವಿವೇಕಪ್ರಭ' ಪತ್ರಿಕೆಯ ಸ್ಥಳೀಯ ಚಂದಾದಾರರೆಲ್ಲರೂ ಈ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಬೇಕಾಗಿ ವಿನಂತಿ.** ❖